ಶ್ರೀ ಚೆಲುವರಾಯಸ್ವಾಮಿ : ಬಹುಶಃ ಒಂದು ವಾರ ಅಥವಾ 15 ದಿವಸದ ಹಿಂದೆ ಆದೇಶ ಮಾಡಿ ಎಲ್ಲ ಜಿಲ್ಲಾಧಿಕಾರಿಗಳಿಗೆ ಕಳುಹಿಸಿಕೊಟ್ಟಿದ್ದೇವೆ. ಎಲ್ಲಾದರೂ ತಲುಪದೇ ಇರುವ ಕಡೆ ಇದ್ದರೆ ಇವತ್ತೇ ತಕ್ಷಣ ಕಳುಹಿಸಿಕೊಡುತ್ತೇನೆ.

157 (2538) **ಶ್ರೀ ಜಗದೀಶ್ (ವಿರೂಪಾಕ್ಷಿ) ಸಿ.ಮೇಟಗುಡ್** (ಬೈಲಹೊಂಗಲ) ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :–

ಅ) ಬೆಳಗಾಂ ಜಿಲ್ಲೆಯಲ್ಲಿ ರಾಜೀವ್‌ಗಾಂಧಿ ಕುಡಿಯುವ ನೀರಿನ ಯೋಜನೆಯಡಿಯಲ್ಲಿ ಹಮ್ಮಿಕೊಳ್ಳಲಾಗಿರುವ ಕಾಮಗಾರಿಗಳಾವುವು (ಯೋಜನೆವಾರು, ತಾಲ್ಲೂಕುವಾರು ವಿವರ ನೀಡುವುದು):

ಆ) ಈ ಯೋಜನೆಯಡಿ ಬೈಲಹೊಂಗಲ ತಾಲ್ಲೂಕಿನ ಅಮಟೂರ ಹಾಗೂ ಇತರ ಕಡೆಗಳಲ್ಲಿ ಸುಮಾರು 19 ಹಳ್ಳಿಗಳಲ್ಲಿ ಈ ಯೋಜನೆಯನ್ನು ರೂಪಿಸಲಾಗಿದೆಯೇ:

ಇ) ಈ ಯೋಜನೆ ವೆಚ್ಚ ಎಷ್ಟು? ಯೋಜನೆಯನ್ನು ಯಾವಾಗ ಅನುಷ್ಠಾನಗೊಳಿಸಲಾಗುತ್ತದೆ; ಕಾಮಗಾರಿ ಮುಗಿಸಲು ಕಾಲಮಿತಿಯನ್ನು ಹಾಕಿಕೊಳ್ಳಲಾಗಿದೆಯೆ?

ಈ) ಬೇಸಿಗೆಯ ಕಾಲದಲ್ಲಿ ಕುಡಿಯುವ ನೀರಿನ ಅಭಾವದ ದೃಷ್ಟಿಯಿಂದ ಸರ್ಕಾರವು ಕೈಗೊಳ್ಳಲಿರುವ ಕಾರ್ಯಕ್ರಮಗಳೇನು? ಪೂರ್ಣ ವಿವರ ನೀಡುವುದು?

ಶ್ರೀ ಬಿ. ಸತ್ಯನಾರಾಯಣ (ಗ್ರಾಮೀಣ ನೀರು ಸರಬರಾಜು ರಾಜ್ಯ ಸಚಿವರು)

ಅ) ವಿವರಗಳನ್ನು ಅನುಬಂಧ 1 ರಲ್ಲಿ ನೀಡಲಾಗಿದೆ.

ಆ) ಹೌದು

ಇ) ಈ ಯೋಜನೆಯ ಮೂಲ ಅಂದಾಜು ಮೊತ್ತ ರೂ.920.00 ಲಕ್ಷ. ಈ ಯೋಜನೆಯನ್ನು ಮೇ 2001 ರಲ್ಲಿ ಕೈಗೆತ್ತಿಕೊಳ್ಳಲಾಗಿದ್ದು, ಪರಿಷ್ಕೃತ ಅಂದಾಜಿನನ್ವಯ ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಿ ಏಪ್ರಿಲ್ 2005 ರ ವೇಳೆಗೆ ಕಾರ್ಯಗತಗೊಳಿಸಲು ಉದ್ದೇಶಿಸಲಾಗಿದೆ.

ಈ) ಬೇಸಿಗೆ ಕಾಲದಲ್ಲಿ ತುರ್ತು ಕುಡಿಯುವ ನೀರಿನ ಸಮಸ್ಯೆ ಯನ್ನು ಬಗೆಹರಿಸಲು ತಾಲ್ಲೂಕು ಮಟ್ಟದಲ್ಲಿ ರಚಿಸಲಾಗಿರುವ ಕಾರ್ಯಪಡೆ ಸ್ಥಳೀಯ ಪರಿಸ್ಥಿತಿ ಆಧರಿಸಿ ಸಮರ್ಪಕ ಕುಡಿಯುವ ನೀರಿನ ವ್ಯವಸ್ಥೆ ಸಲುವಾಗಿ ಸೂಕ್ತ ಕ್ರಮ ಕೈಗೊಳ್ಳುತ್ತದೆ. ಈ ಸಲುವಾಗಿ ಅಗತ್ಯ ಅನುದಾನವನ್ನು ಸಹ ಕಾರ್ಯಪಡೆ ಸುಪರ್ದಿಗೆ ನೀಡಲಾಗಿದೆ.

ಸಂಖ್ಯೆ : 2558 ರ ಅನುಬಂಧ –1

ಚಿಕ್ಕೋಡಿ :
1) ನೇಜ್ ಗ್ರಾಮದ ನೀರು ಸರಬರಾಜು ಯೋಜನೆ
2) ಕಾರಡಗ ಗ್ರಾಮದ ನೀರು ಸರಬರಾಜು ಯೋಜನೆ
3) ರೂಪನಾಳ ಹಾಗೂ ಸಿದ್ದಾಪುರವಾಡಿ ಗ್ರಾಮಗಳ ಸಂಯುಕ್ತ ನೀರು ಸರಬರಾಜು ಯೋಜನೆ.
4) ಶಿರಗಾಂನ ಹಾಗೂ ಇತರ 6 ಗ್ರಾಮಗಳ ಸಂಯುಕ್ತ ನೀರು ಸರಬರಾಜು ಯೋಜನೆ
5) ಮೊಣಕಾಪೂರ ಹಾಗೂ ಕಸನಾಳ ಗ್ರಾಮಗಳ ಸಂಯುಕ್ತ ನೀರು ಸರಬರಾಜು ಯೋಜನೆ
6) ಇಂಗಳಿ ಗ್ರಾಮ ನೀರು ಸರಬರಾಜು ಯೋಜನೆ
7) ಮಾಂಗೂರು ಗ್ರಾಮ ನೀರು ಸರಬರಾಜು ಯೋಜನೆ
8) ಮಲ್ಲಿಕ್ ವಾಡ್ ಗ್ರಾಮ ನೀರು ಸರಬರಾಜು ಯೋಜನೆ.
9) ನಾಗರಾಳ ಗ್ರಾಮ ನೀರು ಸರಬರಾಜು ಯೋಜನೆ.
10) ಕೇರೂರ ಹಾಗೂ ಇತರ 2 ಗ್ರಾಮಗಳ ನೀರು ಸರಬರಾಜು ಯೋಜನೆ
11) ಅಡಿ ಹಾಗೂ ಇತರ 2 ಗ್ರಾಮಗಳ ನೀರು ಸರಬರಾಜು ಯೋಜನೆ
12) ಗಳತಗಾ ಗ್ರಾಮದ ನೀರು ಸರಬರಾಜು ಯೋಜನೆ

ಗೋಕಾಕ್ :
13) ಕನಗಾವ್ ಹಾಗೂ ಇತರೆ 8 ಗ್ರಾಮಗಳ ನೀರು ಸರಬರಾಜು ಯೋಜನೆ
14) ಯಾದವಾಡ ಹಾಗೂ ಇತರೆ 2 ಗ್ರಾಮಗಳಿಗೆ ನೀರು ಸರಬರಾಜು ಯೋಜನೆ
15) ಕುಳಗೋಳ ಗ್ರಾಮದ ನೀರು ಸರಬರಾಜು ಯೋಜನೆ

ಹುಕ್ಕೇರಿ :
16) ನಿಡಸೋಸಿ ಹಾಗೂ ಇತರೆ 2 ಗ್ರಾಮಗಳ ನೀರು ಸರಬರಾಜು ಯೋಜನೆ

17) ಯಲಿಮುನೋಳ್ಳಿ ಹಾಗೂ ಇತರೆ 3 ಗ್ರಾಮಗಳ ನೀರು ಸರಬರಾಜು ಯೋಜನೆ

ರಾಯಭಾಗ : 18) ದಿಗ್ಗೇವಾಡಿ ಹಾಗೂ ಇತರೆ 4 ಗ್ರಾಮಗಳ ನೀರು ಸರಬರಾಜು ಯೋಜನೆ

ಬೈಲಹೊಂಗಲ : 19) ಅಮಟೂರು ಮತ್ತು ಹಾಗೂ ಇತರೆ 19 ಹಳ್ಳಿಗಳಿಗೆ ನೀರು ಸರಬರಾಜು ಯೋಜನೆ

ಸವದತ್ತಿ : 20) ಉಗರಗೋಳ ಹಾಗೂ ಇನ್ನಿತರ 13 ಹಳ್ಳಿಗಳಿಗೆ ನೀರು ಸರಬರಾಜು ಯೋಜನೆ

ಶ್ರೀ ಜಗದೀಶ್ (ವಿರೂಪಾಕ್ಷಿ) ಸಿ. ಮೇಟಗುಡ್ : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ. 3ನೇ ಪ್ರಶ್ನೆಯಲ್ಲಿ 9 ಕೋಟಿ 20 ಲಕ್ಷ ಈ ಯೋಜನೆಗೆ ಖರ್ಚಾಗಿದೆ ಎಂದು ಹೇಳಿದ್ದಾರೆ. ಆದರೆ ಈಗಾಗಲೇ 12 ಕೋಟಿ ರೂಪಾಯಿ ಮೇಲೆ ಈ ಯೋಜನೆಗೆ ಖರ್ಚಾಗಿದೆ. ನಾಲ್ಕನೇ ಪ್ರಶ್ನೆಯಲ್ಲಿ ಬೇಸಿಗೆ ಕಾಲದಲ್ಲಿ ಕುಡಿಯುವ ನೀರಿನ ಅಭಾವದ ದೃಷ್ಟಿಯಿಂದ ಈ ಯೋಜನೆ ಮುಖಾಂತರ ಸರಬರಾಜು ಮಾಡಬಹುದೇ ಎಂದು ನಾನು ಕೇಳಿದ್ದೆ. ಆದರೆ ಅವರು ಇವತ್ತು ಬೇರೆ ತಾಲ್ಲೂಕು ಮಟ್ಟದ ನೀರಿನ ಸರಬರಾಜಿನ ಬಗ್ಗೆ ಉತ್ತರವನ್ನು ಕೊಟ್ಟಿದ್ದಾರೆ, ಈ ಬೇಸಿಗೆ ಕಾಲದಲ್ಲಿ ಜಾಕ್‌ವೆಲ್ ಏನು ಇದೆ? ಇಲ್ಲಿ ನಾವು ಜಾಕ್‌ವೆಲ್‌ಅನ್ನು ಜಾಲೂ ಮಾಡಬೇಕಾದರೆ ಮಿನಿಮಮ್ 5 ರಿಂದ 6 ಅಡಿ ನೀರು ನದಿಯಲ್ಲಿ ಬೇಕಾಗುತ್ತದೆ. ಆದರೆ ಬೇಸಿಗೆ ಕಾಲದಲ್ಲಿ ಈ ನದಿಯಲ್ಲಿ ಅಷ್ಟೊಂದು ನೀರು ಇರುವುದಿಲ್ಲ. ಆದ ಕಾರಣ ಇವರು 3–4 ತಿಂಗಳು ಈ ಯೋಜನೆಯಿಂದ 19 ಹಳ್ಳಿಗೆ ನೀರು ಕೊಡಲಿಕ್ಕೆ ಆಗುವುದಿಲ್ಲ. ಆದಕ್ಕೆ ಯಾವ ಕ್ರಮವನ್ನು ತೆಗೆದುಕೊಂಡಿದ್ದಾರೆ ಎಂದು ನಾನು ಪ್ರಶ್ನೆ ಕೇಳಿದ್ದೆ. ಅದಕ್ಕೆ ದಯಮಾಡಿ ಮಂತ್ರಿಗಳು ಉತ್ತರಿಸಬೇಕು.

ಶ್ರೀ ಬಿ. ಸತ್ಯನಾರಾಯಣ (ಗ್ರಾಮೀಣ ನೀರು ಸರಬರಾಜು, ನೈರ್ಮಲ್ಯ ಮತ್ತು ಗ್ರಾಮೀಣಾಭಿವೃದ್ಧಿ ಇಂಜಿನಿಯರಿಂಗ್ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೇ, ಬೈಲಹೊಂಗಲ ತಾಲ್ಲೂಕಿನ ಅಮಟೂರು ಹಾಗೂ ಇತರೆ ಹಳ್ಳಿಗಳಿಗೆ 2001 ನೇ ಸಾಲಿನಲ್ಲಿ ಸುಮಾರು 920 ಲಕ್ಷದ ಅಂದಾಜಿನಲ್ಲಿ ಒಂದು ಯೋಜನೆಯನ್ನು ಸಿದ್ಧಪಡಿಸಿ ನಮ್ಮ ಲ್ಯಾಂಡ್ ಆರ್ಮಿ ಕಾರ್ಪೊರೇಷನ್‌ನವರು ಆ ಕೆಲಸವನ್ನು ಪ್ರಾರಂಭ ಮಾಡಿದ್ದಾರೆ. ಅದು ಪರಿಷ್ಕೃತಗೊಂಡು 2003 ರಲ್ಲಿ 1125.25 ಲಕ್ಷಕ್ಕೆ ಪರಿಷ್ಕೃತ ಆಗಿದೆ. ಈ ಉದ್ದೇಶಿತ ಯೋಜನೆಯನ್ನು ಏಪ್ರಿಲ್ 2005 ರ ಅಂತ್ಯದಲ್ಲಿ ಪರಿಷ್ಕೃತ ಅಂದಾಜಿನ ಅನ್ವಯ